**ಸಾಕ್ಷಿಯನ್ನು ದಿಃ 05.01.2023 ರಂದು ಕರೆಸಿ ಪ್ರಮಾಣೀಕರಿಸಲಾಯಿತು**

**ಪಾಟೀಸವಾಲು ವಾದಿ ಪರ ಶ್ರೀ ಕೆ ಪಿ ಎಂ ವಕೀಲರಿಂದಃ**

ಪ್ರತಿವಾದಿ 1 ಮತ್ತು 2 ರವರು ನನಗೆ 2008 ನೇ ಇಸವಿ ಇಂದ ಪರಿಚಯ ವಿರುತ್ತಾರೆ. ಅದಕ್ಕಿಂತ ಪೂರ್ವದಲ್ಲಿ ಅವರ ಬಗೆಗಿನ ವಿಚಾರಗಳು ನನಗೆ ಗೊತ್ತಿಲ್ಲ. 1 ನೇಪ್ರತಿವಾದಿ 2 ನೇಪ್ರತಿವಾದಿಯ ಗಂಡ ಇರುತ್ತಾರೆ. ಈ ವಿಚಾರ ನನಗೆ 2008 ನೇ ಇಸವಿಯಲ್ಲಿ ಗೊತ್ತಿರುತ್ತದೆ. 1 ನೇಪ್ರತಿವಾದಿ ಭಾರತ್ ಸ್ಟೋರ್ ಎಂಬ ಅಂಗಡಿ ಇಟ್ಟು ಕೊಂಡಿರುತ್ತಾರೆ. ಸದರಿ ಅಂಗಡಿಯನ್ನು 1 ನೇಪ್ರತಿವಾದಿ ಎಷ್ಟು ವರ್ಷದಿಂದ ನಡೆಸುತ್ತಿದ್ದಾರೆಂದು ನನಗೆ ಗೊತ್ತಿಲ್ಲ, ಆದರೆ ನನಗೆ ಬುದ್ದಿ ಬಂದಾಗಿನಿಂದಲೂ ಸದರಿ ಅಂಗಡಿ ಇರುತ್ತದೆ. ಸದರಿ ಅಂಗಡಿಯನ್ನು ಪ್ರತಿವಾದಿ 1 ಮತ್ತು 2 ಹಾಗೂ 1 ನೇಪ್ರತಿವಾದಿಯ ತಂದೆ ಮೂರೇ ಜನ ನಡೆಸುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ನನ್ನ ಸ್ನೇಹಿತರಲ್ಲ. 1 ನೇಪ್ರತಿವಾದಿಯ ಸಹೋದರ ನನ್ನ ಸ್ನೇಹಿತನಿದ್ದು ಅವರಿಂದ 1 ನೇಪ್ರತಿವಾದಿಯ ಪರಿಚಯವಾಗಿರುತ್ತದೆ. 1 ನೇಪ್ರತಿವಾದಿಯ ಸಹೋದರ ನಾನು 2008 ರಲ್ಲಿ ನಿವೃತ್ತಿ ಆಗಿ ಬಂದ ನಂತರ ದಿಂದ ಪರಿಚಿತರಿರುತ್ತಾರೆ.

ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವ ಕಾನೂನಿನ ಅಂಶಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ವಾದಿ ಸಲ್ಲಿಸಿರುವ ದಾವೆಯ ಬಗ್ಗೆ ನನಗೆ ಗೊತ್ತಿರುತ್ತದೆ. ವಾದಿಯರು ಸಲ್ಲಿಸಿರುವ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ದಾವಸ್ವತ್ತು ಮೂಲತಃ ಲಕ್ಷ್ಮಿನರಸಿಂಹಯ್ಯ ರವರಿಗೆ ಸೇರಿದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿಯವರು ನಂತರ ಸ್ವತ್ತನ್ನು ಶಿವರಾಂ ಮತ್ತು ಅನಂತರಾಂ ರವರಿಗೆ ಮಾರಾಟ ಮಾಡಿದ್ದಾರೆಂದರೆ ಸರಿ. ಶಿವರಾಂ ಮತ್ತು ಅನಂತರಾಂ ರವರಿಂದ ದಿಃ 3.5.1991 ರಂದು ಸತ್ತಿ ರವರು ಖರೀದಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ದಿಃ 8/7/1999 ರಂದು ಸತ್ತಿರವರು ಮುನಿಯಮ್ಮ ರವರಿಗೆ ಸದರಿ ಸ್ವತ್ತನ್ನು ಮಾರಾಟ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ. ಮುನಿಯಮ್ಮ ರವರು ದಿಃ 27/3/2003 ರಂದು ವಾದಿ ಮಂಜುಳ ರವರಿಗೆ ಸ್ವತ್ತನ್ನು ಮಾರಾಟ ಮಾಡಿದ್ದಾರೆಂದರೆ ಸರಿ. ನಿಡಿ-1 ರಲ್ಲಿ ಹೇಳಿರುವ ದಿಃ 8/7/99 ರ ಪತ್ರ ನನ್ನ ಬಳಿ ಇರುವುದಿಲ್ಲ. ಸದರಿ ದಾಖಲಾತಿಯ ಬಗ್ಗೆ ನಾನು ಪರಿಶೀಲನೆ ಮಾಡಿರುವುದಿಲ್ಲ, ಸಾಕ್ಷಿಯು ಮುಂದುವರೆದು ಸದರಿ ದಾಖಲಾತಿಯನ್ನು ನನಗೆ ನೀಡಿಲ್ಲವೆಂದು ನುಡಿಯುತ್ತಾರೆ.

ನಾನು ಕ್ರಯಕ್ಕೆ ಪಡೆಯುವ ಮೊದಲು ಮೂಲ ದಾಖಲಾತಿಗಳನ್ನು ಪರಿಶೀಲನೆ ಮಾಡಲು ಕೊಡುವಂತೆ ಕೇಳಿರುವುದಿಲ್ಲ. 2003 ಕ್ಕಿಂತ ಮೊದಲಿನ ಯಾವುದೇ ದಾಖಲಾತಿಗಳು ನನ್ನ ಬಳಿ ಇಲ್ಲ ಎಂದರೆ ಸರಿ. ನಾನು ಖರೀದಿ ಮಾಡುವ ಪೂರ್ವದಲ್ಲಿ ಸದರಿ ಸ್ವತ್ತಿನ ಮೂಲ ದಾಖಲಾತಿಗಳನ್ನು ಅಭಿಪ್ರಾಯ ಪಡೆಯುವುದಾಗಿ ಹೇಳಿ ನನ್ನ ಮಾರಾಟಗಾರರಿಂದ ದಾಖಲಾತಿಗಳನ್ನು ಪಡೆದಿರುವುದಿಲ್ಲ ಎಂದರೆ ಸಾಕ್ಷಿಯು ನಿಡಿ-1 ಅನ್ನು ಮಾತ್ರ ನೀಡಿರುತ್ತಾರೆಂದು ನುಡಿಯುತ್ತಾರೆ. ನಿಡಿ-1 ಅನ್ನು ಮಾತ್ರ ನೋಡಿ ಆಸ್ತಿ ಖರೀದಿ ಮಾಡಿದ್ದೀರಾ ಎಂದರೆ ಸಾಕ್ಷಿಯು ಬೇರೆ ದಾಖಲಾತಿಗಳನ್ನೂ ಕೂಡ ನೋಡಿ ಖರೀದಿ ಮಾಡಿರುತ್ತೇನೆಂದು ನುಡಿಯುತ್ತಾರೆ. ಸದರಿ ಬೇರೆ ದಾಖಲಾತಿಗಳು ನಗರಸಭೆಯ ಖಾತೆ ಎಕ್ಸ್ಟ್ರಾಕ್, ಬಂಗಾರಪೇಟೆಯಲ್ಲಿ ಅನಿತಾ ರವರ ಹೆಸರಿನಲ್ಲಿ ಆಗಿರುವ ಕ್ರಯಪತ್ರ, ಜಿ ಪಿ ಎ, ಕ್ರಯ ಕರಾರುಪತ್ರಗಳನ್ನು ನೋಡಿರುತ್ತೇನೆ. ನಾನು ನೋಡಿರುವ ದಾಖಲಾತಿಗಳು ವಾದಿ ಪರ ಹಾಜರುಪಡಿಸಿದ ದಾಖಲಾತಿಗಳು ಅಲ್ಲ ಎಂದರೆ ಸರಿ. ನಾನು ಪಡೆದುಕೊಂಡ ದಾಖಲಾತಿಗಳನ್ನು ಮಣಿ ಎಂಬ ವಕೀಲರ ಬಳಿ ಪರಿಶೀಲಿಸಿರುತ್ತೇನೆ. ನಾನು ಸದರಿ ವಕೀಲರಿಂದ ಕಾನೂನು ಅಭಿಪ್ರಾಯವನ್ನು ಪಡೆದುಕೊಂಡಿರುವುದಿಲ್ಲ.

ನಾನು, ಪ್ರತಿವಾದಿ 1 ಮತ್ತು 2 ಹಾಗೂ ಪ್ರತಿವಾದಿ 1 ರವರ ತಮ್ಮನ ಸ್ನೇಹಿತ ಎಂದರೆ ಸರಿಯಲ್ಲ. ದಾವಸ್ವತ್ತು ನಾನು ಖರೀದಿಸಿರುವ ಪೂರ್ವದಲ್ಲಿ ವಾದಿರವರಿಗೆ ಸೇರಿತ್ತು ಎಂದರೆ ಸರಿ. ಸದರಿಯವರಿಂದ ಬಂದ ಆಸ್ತಿಯನ್ನೇ ನಾನು ಖರೀದಿ ಮಾಡಿರುತ್ತೇನೆಂದರೆ ಸರಿ. ನಾನು ಈ ದಾವೆಯಲ್ಲಿ ತಕರಾರು ಸಲ್ಲಿಸುವ ಮತ್ತು ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ಸಲ್ಲಿಸುವ ಪೂರ್ವದಲ್ಲಿ ದಾವಸ್ವತ್ತು ಮೂಲತಃ ವಾದಿಯರಿಗೆ ಸೇರಿದ ಸ್ವತ್ತು ಎಂದು ನನಗೆ ಗೊತ್ತು ಎಂದರೆ ಸರಿ. ನಾನು ಖರೀದಿಸುವ ಪೂರ್ವದಲ್ಲಿ ಸದರಿ ಸ್ವತ್ತು ವಾದಿರವರಿಗೆ ಸೇರಿತ್ತು ಎಂಬ ವಿಚಾರ ನನಗೆ ಗೊತ್ತಿದ್ದರೂ ಕೂಡ ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಸದರಿ ಸ್ವತ್ತು ವಾದಿಗೆ ಸಂಬಂಧಿಸಿದ್ದಲ್ಲ ಎಂದು ಸುಳ್ಳು ಹೇಳಿದ್ದೇನೆಂದರೆ ಸರಿಯಲ್ಲ. ನಿಡಿ 29 ಮತ್ತು 30 ದಾಖಲಾತಿಗಳನ್ನು ನಾನು ವಕೀಲ ಬಳಿ ತೆಗೆದುಕೊಂಡು ಹೋಗಿ ಅವುಗಳು ಕಾನೂನು ಬದ್ದ ದಾಖಲಾತಿಗಳು ಎಂಬ ಬಗ್ಗೆ ಕಾನೂನು ಅಭಿಪ್ರಾಯವನ್ನು ಮೌಖಿಕವಾಗಿ ಪಡೆದಿರುತ್ತೇನೆ, ಲಿಖಿತವಾಗಿ ಪಡೆದಿರುವುದಿಲ್ಲ. ನಾನು ಯಾವುದೇ ಅಭಿಪ್ರಾಯವನ್ನು ಪಡೆಯದೇ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪ್ರತಿವಾದಿ 1 ಮತ್ತು 2 ಹಾಗೂ 1ನೇಪ್ರತಿವಾದಿಯ ಸಹೋದರ ಕೆ ಜಿ ಎಫ್ ನಲ್ಲಿ ವಾಸ ಇದ್ದಾರೆಂದರೆ ಸಾಕ್ಷಿಯು 2ನೇಪ್ರತಿವಾದಿ ಬೆಂಗಳೂರಿನ ವಾಸಿ ಇದ್ದು ವಿವಾಹದ ನಂತರ ಇಲ್ಲಿಗೆ ಬಂದಿದ್ದಾರೆಂದು ನುಡಿಯುತ್ತಾರೆ. 2ನೇ ಪ್ರತಿವಾದಿ ಬೆಂಗಳೂರಿನಲ್ಲಿ ಎಲ್ಲಿ ವಾಸ ಇದ್ದರೆಂಬ ಬಗ್ಗೆ ಮತ್ತು ಯಾವಾಗ ಕೆ ಜಿ ಎಫ್ ಗೆ ಬಂದ ರೆಂಬ ಬಗ್ಗೆ ನನಗೆ ಗೊತ್ತಿಲ್ಲ. 1 ಮತ್ತು 2ನೇ ಪ್ರತಿವಾದಿಗೆ ಎಷ್ಟು ಜನ ಮಕ್ಕಳೆಂದು ನನಗೆ ಗೊತ್ತಿಲ್ಲ. ನಿಡಿ-5 ಆಗುವ ಕಾಲಕ್ಕೆ 1 ಮತ್ತು 2ನೇ ಪ್ರತಿವಾದಿಯ ವಿವಾಹ ವಾಗಿತ್ತು ಎಂದರೆ ಸರಿ. ನಿಡಿ-6 ರಲ್ಲಿ 2ನೇ ಪ್ರತಿವಾದಿಯ ವಿಳಾಸದಲ್ಲಿ ಅವರ ಗಂಡನ ಹೆಸರು ನಮೂದು ಇರುವುದಿಲ್ಲ, ಅವರ ತಂದೆಯ ಹೆಸರು ನಮೂದು ಇದೆ ಎಂದರೆ ಸರಿ. ಸದರಿ ದಾಖಲಾತಿಯಲ್ಲಿ ಅವರ ವಿಳಾಸವನ್ನು ಪೆನ್ನಿ ನಲ್ಲಿ ಬರೆದಿದ್ದಾರೆಂದರೆ ಸರಿ. ನನ್ನ ಹೆಸರಿಗೆ ಆಗಿದೆ ಎಂದು ಹೇಳುವ ನಿಡಿ-5 ದಾಖಲಾತಿಯಲ್ಲಿ 2ನೇಪ್ರತಿವಾದಿಯ ಗಂಡನ ಹೆಸರು ನಮೂದು ಇಲ್ಲ ಎಂದರೆ ಸರಿ. ಸದರಿ ದಾಖಲಾತಿ ಆಗುವ ಸಮಯದಲ್ಲಿ 2ನೇಪ್ರತಿವಾದಿಯ ಗಂಡ ಇರುವುದರಿಂದ ಅವರ ಹೆಸರನ್ನೇ ನಮೂದು ಮಾಡುವಂತೆ ನಾನು ಹೇಳಿರುವುದಿಲ್ಲ. ಸದರಿ ದಾಖಲಾತಿಯಲ್ಲಿ ಏಕೆ ಗಂಡನ ಹೆಸರು ಇಲ್ಲ ಎಂಬ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ. ಈ ದಾವೆ ಸಲ್ಲಿಸಿದ ನಂತರ ಕೂಡ ಈ ಕುರಿತು 2ನೇಪ್ರತಿವಾದಿಯ ಬಳಿ ವಿಚಾರಣೆ ಮಾಡಿರುವುದಿಲ್ಲ. ನಿಡಿ-6 ದಾಖಲಾತಿ 1ನೇಪ್ರತಿವಾದಿ 2ನೇಪ್ರತಿವಾದಿಯ ಹೆಸರಿಗೆ ಮಾಡಿರುವ ದಾಖಲಾತಿ ಎಂದರೆ ಸರಿ. ಈ ದಾವೆಯಲ್ಲಿ ಅಧಿಕಾರ ಪತ್ರದ ಬಗ್ಗೆ ವಾದಿಯರು ಹೇಳಿರುವ ವಿಚಾರಗಳ ಬಗ್ಗೆ ನನಗೆ ಗೊತ್ತು. ಅವರು ಯಾವುದೇ ಅಧಿಕಾರ ಪತ್ರ ಬರೆದುಕೊಟ್ಟಿಲ್ಲ, ಅದು ಸೃಷ್ಟಿ ಮಾಡಿದ ದಾಖಲಾತಿ ಎಂದು ಈ ಪ್ರಕರಣ ನಡೆಸುತ್ತಿದ್ದಾರೆಂದರೆ ಸರಿ.

ನಿಡಿ-29 ದಾಖಲಾತಿ 2003-04 ರಲ್ಲಿ ಆಗಿರುತ್ತದೆ. ನಿಡಿ-29 ಅನ್ನು ದಾಖಲಾತಿಗಳ ಪತ್ರದ ಮೇಲೆ ಬರೆಯಲಾಗಿದೆ ಎಂದರೆ ಸರಿ. ಸದರಿ ದಾಖಲಾತಿಯನ್ನು ಬರೆದ ಸುಮಾರು ದಿನಗಳ ನಂತರ ಸದರಿ ದಾಖಲಾತಿಯ ಮೇಲೆ ಸ್ಟಾಂಪ್ ಶುಲ್ಕ ಪಾವತಿ ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ವಿಚಾರ ನನಗೆ ಮೊದಲು ಗೊತ್ತಿರಲಿಲ್ಲ. ನಿಡಿ-30 ದಾಖಲಾತಿ ದಿ: 19.5.2004 ರಂದು ದಾಖಲಾತಿ ಪತ್ರದ ಮೇಲೆ ಬರೆಯಲಾಗಿದೆ ಎಂದರೆ ಸರಿ. ಸದರಿ ದಾಖಲಾತಿಯ ಮೇಲೆ ಸ್ಟಾಂಪ್ ಶುಲ್ಕವನ್ನು ದಿ: 3.6.2004 ರಂದು ಸ್ಟಾಂಪ್ ಶುಲ್ಕ ಪಾವತಿ ಮಾಡಲಾಗಿದೆ ಎಂದರೆ ಸರಿ.

ನಿಡಿ-29, 30 ರ ಕುರಿತು ವಾದಿಯು ಈ ದಾವೆ ಸಲ್ಲಿಸಿದ್ದಾರೆಂದರೆ ಸಾಕ್ಷಿಯು ಆಸ್ತಿ ನಮ್ಮದು ಎಂದು ದಾವೆ ಸಲ್ಲಿಸಿದ್ದಾರೆಂದು ನುಡಿಯುತ್ತಾರೆ. ನಿಡಿ-30 ರಲ್ಲಿ ಬಾಕಿ ಹಣವನ್ನು ನೀಡುವುದಾಗಿ ಹೇಳಿರುವ ವಿಚಾರದ ಕುರಿತು ಹಾಗೂ ನಂತರ ಸದರಿ ಬಾಕಿ ಹಣವನ್ನು ಪಾವತಿ ಮಾಡಿದ ಕುರಿತು ಯಾವುದೇ ದಾಖಲಾತಿಗಳನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಬಾಕಿ ಹಣ ಪಾವತಿ ಮಾಡಿಲ್ಲವೆಂದು ನುಡಿಯುತ್ತಾರೆ. ನಿಡಿ-29 ರಲ್ಲಿ ಸದರಿ ಬಾಕಿ ಹಣದ ಬಗ್ಗೆ ಹಾಗೂ ಅದು ಪಾವತಿ ಆದ ಬಗ್ಗೆ ನಮೂದು ಇಲ್ಲ ಎಂದರೆ ಸರಿ. ಬಾಕಿ ಹಣ ಪಾವತಿ ಮಾಡಿದ ಬಗ್ಗೆ ದಾಖಲಾತಿಗಳನ್ನು ಕೊಡಿ ಎಂದು ನಾನು ಖರೀದಿ ಮಾಡುವ ಸಮಯದಲ್ಲಿ ಕೇಳಿರುವುದಿಲ್ಲ. ನಾನು ಖರೀದಿ ಮಾಡುವ ಸಮಯದಲ್ಲಿ ಬಾಕಿ ಹಣ ಇರುವ ಬಗ್ಗೆ ನನಗೆ ಗೊತ್ತು ಎಂದರೆ ಸರಿ. ನಾನು ಆಸ್ತಿಯನ್ನು ಖರೀದಿ ಮಾಡುವ ಪೂರ್ವದಲ್ಲಿ ವಾದಿ ರವರಿಗೆ ವಿಚಾರವನ್ನು ತಿಳಿಸಿರುವುದಿಲ್ಲ. ನನ್ನ ಹೆಸರಿಗೆ ಖಾತೆ ಮಾಡಿಸಿ ಕೊಳ್ಳುವ ಸಮಯದಲ್ಲೂ ಕೂಡ ವಾದಿ ರವರಿಗೆ ತಿಳಿಸಿರುವುದಿಲ್ಲ ಎಂದರೆ ಸರಿ.

ತಳಪಾಯ ಹಾಕಲು ಪ್ರಾರಂಭಿಸಿದ ಸಮಯದಲ್ಲಿ ವಾದಿಯು ನನ್ನ ಮತ್ತು 1ನೇಪ್ರತಿವಾದಿಯ ವಿರುದ್ದ ದೂರು ಸಲ್ಲಿಸಿದ್ದರು ಎಂದರೆ ಸಾಕ್ಷಿಯು ಅದಕ್ಕೂ ಪೂರ್ವದಲ್ಲಿಯೇ ಕರೆಸಿದ್ದರು ಎಂದು ನುಡಿಯುತ್ತಾರೆ. ಈ ಕುರಿತು ನಮ್ಮನ್ನು ಪೊಲೀಸ್ ಠಾಣೆಗೆ ಕರೆಸಿದ್ದರು ಎಂದರೆ ಸರಿ. ಆ ಸಮಯದಲ್ಲಿ ಮಂಜುಳ ರವರು ಆಸ್ತಿ ಅವರದೇ ಎಂದು ಹೇಳಿದ್ದರು ಎಂದರೆ ಸರಿಯಲ್ಲ. ಪೊಲೀಸ ಠಾಣೆಯಲ್ಲಿ ಮಂಜುಳ ರವರು ಆಸ್ತಿ ಅವರದ್ದೇ ಇದ್ದು 1ನೇಪ್ರತಿವಾದಿ ಒತ್ತುವರಿ ಮಾಡಿಕೊಳ್ಳಲು ಬಂದಿದ್ದಾರೆಂದು ಹೇಳಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಎರಡೂ ಕಡೆಯವರಿಗೆ ನಮ್ಮ ಬಳಿ ಇರುವ ದಾಖಲಾತಿಗಳನ್ನು ತೆಗೆದುಕೊಂಡು ಬರುವಂತೆ ಹೇಳಿದ್ದರು ಎಂದರೆ ಸರಿ. ನಾನು ನನ್ನ ಬಳಿ ಇದ್ದ ದಾಖಲಾತಿಗಳನ್ನು ಪೊಲೀಸರಿಗೆ ತೋರಿಸಿರುತ್ತೇನೆ. ಎರಡೂ ಕಡೆಯ ದಾಖಲಾತಿಗಳನ್ನು ನೋಡಿದ ನಂತರ ವಾದಿಯು ಈ ದಾವೆಯನ್ನು ಸಲ್ಲಿಸಿದ್ದಾರೆಂದರೆ ಸರಿ. ನಾನೇ ಮಾಲೀಕನೆಂದು ಘೋಷಿಸುವಂತೆ ಕೋರಿ ನಾನು ಯಾವುದೇ ಪ್ರತ್ಯೇಕ ದಾವೆ ಸಲ್ಲಿಸಿರುವುದಿಲ್ಲ. 1 ಮತ್ತು 2ನೇ ಪ್ರತಿವಾದಿಯ ವಿರುದ್ದ ನಾನು ಪ್ರತ್ಯೇಕ ದಾವೆ ಸಲ್ಲಿಸಿರುವುದಿಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ಅನುಮತಿಸಿ ನೀಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

(ಮಂಜುನಾಥ. ಆರ್)

ಪ್ರಧಾನ ಸಿವಿಲ್ ನ್ಯಾಯಾಧೀಶರು, ಕೆ ಜಿ ಎಫ್